ಗುಂಡ: ಏನೋ... ಈ ಪಾಟಿ ದೊಡ್ಡ ಪ್ರೈಜ್ ತಗೊಂಡು ಬರ್ತಾ ಇದೀಯಾ?

ತಿಮ್ಮ: ಅಯ್ಯೋ ಅದಾ! ಈವತ್ತು ಒಂದು ಕಡೆ ಸುಳ್ಳು ಹೇಳುವ ಸ್ಪರ್ಧೆ ಏರ್ಪಾಡು ಮಾಡಿದ್ರು! ನಂಬಲು ಆಗದ ಸುಳ್ಳು ಒಬ್ಬರೂ ಹೇಳಲೇ ಇಲ್ಲ. ಕೊನೆಗೆ ನನ್ನನ್ನು ವೇದಿಕೆ ಮೇಲೆ ನಿಲ್ಲಿಸಿಯೇ ಬಿಟ್ರು. ಇನ್ನೇನ್ ಮಾಡೋದು ನಾನು ಮೈಕ್ ಹಿಡಿದು 'ಕ್ಷಮಿಸಿ ನನಗೆ ಸುಳ್ಳು ಹೇಳಿ ಅಭ್ಯಾಸ ಇಲ್ಲ' ಎಂದು ಹೇಳಿ ಬಂದು ಕುಳಿತೆ. ಅಷ್ಟಕ್ಕೇ ನನಗೆ 'ಅತೀ ಉತ್ತಮ ಸುಳ್ಳುಗಾರ' ಎಂದು ಈ ಪ್ರೈಜ್ ಕೊಟ್ರು!

***

ಅದೊಂದು ಕೋರ್ಟ್ ಹಾಲ್, ಕೇಸ್ ಏನಪ್ಪಾ ಅಂದ್ರೆ ಕುಡುಕರ ಕಾಟ ತುಂಬಾ ಜಾಸ್ತಿಯಾಗಿ ಹತ್ತಾರು ಜನರನ್ನು ಪೊಲೀಸರು ಜಡ್ಜ್ ಮುಂದೆ ಹಾಜರುಪಡಿಸಿದ್ದರು. ಜಡ್ಜ್ ಇನ್ನೂ ಬಂದಿರಲಿಲ್ಲ.

ಎಲ್ಲರ ಜೊತೆ ನಮ್ ಗಂಡನೂ ಸಖತ್ ಟೈಟ್ ಆಗಿ ತಾಳ್ಮೆ ಕಳೆದುಕೊಂಡಿದ್ದ.

ಕೊನೆಗೂ ಜಡ್ಜ್ ಬಂದು ತಮ್ಮ ಸೀಟ್ ನಲ್ಲಿ ಕುಳಿತು ಬಂದವರೇ ಸುತ್ತಿಗೆಯಿಂದ ಟೇಬಲ್ ಮೇಲೆ ಕುಟ್ಟುತ್ತಾ ಜೋರಾಗಿ ಇಡೀ ಕೋರ್ಟ್ ಹಾಲ್‌ಗೇ ಕೇಳಿಸುವ ಹಾಗೆ 'ಆರ್ಡರ್... ಆರ್ಡರ್' ಎಂದರು.

ಪಾಪ ಮೊದ್ಲೇ ಮಂಪರಿನಲ್ಲಿ ಇದ್ದ ನಮ್ ಗುಂಡ ಥಟ್ ಅಂತಾ ಎಚ್ಚರವಾಗಿ 'ಒಂದ್ ಸಿಗ್ನೇಚರ್ ವಿಸ್ಕಿ ಒಂದ್ ಪೊಟ್ಟಣ ಕಡ್ಲೇ ಬೀಜ, ಹಾಗೆ ಬರ್ತಾ ಒಂದ್ ಆಫ್ ಪ್ಲೇಟ್ ಎಗ್ ಬುರ್ಜಿನೂ ತತ್ತಾ...' ಎಂದು ಕೂಗಿಯೇ ಬಿಟ್ಟ.

***

ಹಳ್ಳಿಗೆ ಕರೆಂಟ್ ಬರೋ ಸುದ್ದಿ ಕೇಳಿ ಹಳ್ಳಿ ಜನ ಖುಷಿಯಿಂದ ಕುಣಿದಾಡಿದರು. ಆಗ ಒಂದು ನಾಯಿಯೂ ಕುಣಿದಾಡುತ್ತಿದ್ದನ್ನು ನೋಡಿದ ನಮ್ ಗುಂಡ...

ಗುಂಡ: ಅಲ್ಲರಿ ನೀನ್ ಯಾಕೇ ಹೀಗೆ ಕುಣೀತಾ ಇದ್ದೀಯಾ? ಎಂದು ಕೇಳಿದ.

ನಾಯಿ: ಕರೆಂಟ್ ಬಂದಾಗ.. ಜೊತೆಗೆ ಕಂಬಗಳು ಸಹಾ ಬರುತ್ತೇ ಅಲ್ವಾ? ಅದಕ್ಕೇ ಖುಷಿಯಾಯ್ತು ಕುಣಿತಾ ಇದೀನಿ.

***

ಗುಂಡ: (ಮೆಟ್ರೋ ಟ್ರೈನಿನಲ್ಲಿ) ನಿಂಗೆ ಗೊತ್ತೇನು ಮೊಬೈಲ್‌ನಲ್ಲಿ ವಾಟ್ಸಪ್/ ಫೇಸ್ ಬುಕ್ ಜಾಸ್ತಿ ಉಪಯೋಗ ಮಾಡೋದ್ರಿಂದ ಮನುಷ್ಯ ಬಹಳ ಮುಂದೆ ಬರ್ತಾನೆ.

ತಿಮ್ಮ: ಏಯ್ .. ಬಿಡೋ, ಅದು ಹೇಗೆ ಮುಂದೆ ಬರೋಕೆ ಸಾಧ್ಯ?

ಗುಂಡ: ಉದಾಹರಣೆಗೆ, ನನ್ನೇ ನೋಡು. ಎಂ.ಜಿ ರೋಡಿನಲ್ಲಿ ಇಳಿಬೇಕಾದವನು ವಿಜಯನಗರಕ್ಕೆ ಬಂದ್ ಬಿಟ್ಟಿದ್ದೀನಿ.

***

ಗುಂಡ: ಹಲೋ ಸಾರ್ ಇದು ಕೆಇಬಿ ಆಫಿಸಾ? ನಮ್ ಮನೆಯಲ್ಲಿ ಕರೆಂಟ್ ಹೋಗಿ ತುಂಬಾ ಹೊತ್ತಾಯ್ತು ಯಾವಾಗ್ ಬರುತ್ತೆ ಸಾರ್?

(ಆತ್ ಕಡೆ ಇಂದ) ಓಹ್... ಹೇಗೆ ಹೇಳೋಕೆ ಆಗುತ್ತೆ ಸಾರ್? ಒಂದ್ ಕೆಲ್ಸಾ ಮಾಡಿ; ನಿಮ್ಮ ಮನೆಯ ಎಲ್ಲಾ ಸ್ವಿಚ್ ಆನ್ ಮಾಡಿ ಇಟ್ಟರಿ ಕರೆಂಟ್ ಬಂದ್ ಕೂಡ್ಲೇ ಗೊತ್ತಾಗುತ್ತೆ.

***



ಮೊನ್ನೆ ಲಾಕ್ ಡೌನ್ ಓಪನ್ ಅದ ಮೇಲೆ ದೇವಸ್ಥಾನಕ್ಕೆ ಮೊದಲು ಹೋದ ನಮ್ ಗುಂಡನ ಕೈಗೆ ಅರ್ಚಕರು ತೀರ್ಥ ಹಾಕಿದ್ರು. ಗುಂಡ ಕಣ್ಣಿಗೆ ಒತ್ತಿಕೊಂಡು ಕುಡಿದ, ಅದು ತುಂಬಾ ಕಹಿ ಆಗಿತ್ತು!

ಗುಂಡ: ಏನಿದು ಅರ್ಚಕರೇ ತೀರ್ಥ ಈ ಪಾಟಿ ಕಹಿ ಆಗಿದೆ?

ಅರ್ಚಕರು: ಅಯ್ಯೋ, ಅದನ್ನಾಕೆ ಕುಡಿದ್ರಿ? ಅದು ತೀರ್ಥ ಅಲ್ಲ ಸ್ವಾಮಿ, ಸ್ಯಾನಿಟೈಜರ್!

ತಿಮ್ಮ: ನಮಗೆ ಹದಿನೆಂಟು ಮಂದಿ ಮಕ್ಕಳಿದ್ದಾರೆ ಕಣೋ. ಆದ್ರೂ ಒಬ್ಬರೂ ನಮ್ ಮನೆ ಕಡೆ ತಲೇನೇ ಹಾಕ್ಲಿಲ್.

ಗುಂಡ: ಅಯ್ಯೋ ಹಾಗಾದ್ರೆ ವೋಟ್ ಕೇಳೋರು ನಿಮ್ ಮನೆಗೆ ಬರಲೇ ಇಲ್ವೇ?

ತಿಮ್ಮ: ನಮ್ ಮನೇ ಮುಂದೆ ಬಂದಿದ್ರು. ಆದ್ರೆ, ಇದು ಯಾವುದೋ 'ಅಂಗನವಾಡಿ' ಇರಬೇಕೆಂದು ವಾಪಸ್ ಹೊರಟು ಹೋದ್ರು.

***

ಡಾಕ್ಟರ್: ಗುಂಡಾ ನಿನ್ ಹೆಂಡ್ತಿಗೆ ಏನೂ ಆಗಿಲ್ಲಾ ಕಣಯ್ಯ , ತುಂಬಾ ಚೆನ್ನಾಗಿಯೇ ಇದ್ದಾರೆ ಸುಮ್ನೆ ಟೆನ್ಷನ್ ಮಾಡ್ಕೋ ಬೇಡ.

ಗುಂಡ: ಛೇ ಛೇ.. ಇಲ್ಲಾ ಡಾಕ್ಟ್ರೇ, ನೀವು ಸರಿಯಾಗಿ ಚೆಕ್ ಮಾಡಿಲ್ಲ. ಅವಳು ಮಾತಾಡ್ತಾ ಮಾತಾಡ್ತಾ ಮಧ್ಯೆ ಮಧ್ಯೆ ನಿಲ್ಲಿಸಿ ಬಿಡ್ತಾಳೆ.

ಡಾಕ್ಟರ್: ಅರೇ ಹೌದಾ? ಯಾಕೆ?

ಗುಂಡ: ಯಾಕಂದ್ರೆ? ಉಸಿರು ತೆಗೆದುಕೊಳ್ಳಲಿಕ್ಕೆ.

***

ಗುಂಡ ತನ್ನ ಹೆಂಡತಿ ಜೊತೆ ಜೋರಾಗಿ ಜಗಳ ಆಡ್ತಾ ಇದ್ದುದನ್ನು ತಿಮ್ಮ ನೋಡಿಯೇ ಬಿಟ್.

(ಸ್ವಲ್ಪ ಹೊತ್ತಾದ ಮೇಲೆ ಗುಂಡ ಆಚೆ ಬಂದ)

ತಿಮ್ಮ: ಲೋ ಗುಂಡಾ, ಅಷ್ಟು ಅರ್ಚಾಡ್ತಾ ಇದ್ರಲ್ಲ ಕೊನೆಗೆ ಏನಾಯಿತು?

ಗುಂಡ: ಅಯ್ ಬಿಡು ಇನ್ನೇನಾಗುತ್ತೆ, ಕೊನೆಗೆ ಅವಳೇ ನನ್ನ ಎದುರಿಗೆ ಮೊಣಕಾಲು ಊರಿ ಕುಳಿತುಕೊಂಡಳು.

ತಿಮ್ಮ: ಭೇಷ್ ಕಣಯ್ಯಾ, ಅದು ಹೇಗೆ ಅಷ್ಟು ಬೇಗ ಸಾಧ್ಯ ಆಯ್ತು?

ಗುಂಡ: ಹೇಗೇ ಅಂದ್ರೇ? ನಾನು ಮಂಚದ ಕೆಳಗೆ ಬಚ್ಚಿಟ್ಟುಕೊಂಡಿದ್ದೆ.

***

ಕಂಡಕ್ಟರ್: ಟಿಕೇಟ್ ತಗೊಳ್ಳಿ ಸಾರ್

ಗುಂಡ: ಮುಂದೆ ತಗೋತಾರೆ.

ಕಂಡಕ್ಟರ್: ಮುಂದೆ ಯಾರೂ ತಗೊಂಡಿಲ್ಲ.

ಗುಂಡ: ಓ.. ಹಿಂದೆ ತಗೋತಾರೆ ನೋಡಿ.

ಕಂಡಕ್ಟರ್: ಇಲ್ಲಾ ಸಾರ್ ಹಿಂದೇನೂ ಯಾರೂ ತಗೊಂಡಿಲ್ಲ.

ಗುಂಡ: ಮತ್ತೆ ನನ್ನನ್ನು ಯಾಕ್ರೀ ಕೇಳ್ತೀರಾ?

(ಸಂಗ್ರಹ) ಆರ್. ವೀರೇಶ್ ಕುಮಾರ್, ಬೆಂಗಳೂರು


ಸರ್ವೇಜನಃ ಸುಖಿನೋ ಭವಂತುಃ
ಸಮಸ್ಯೆ ನಿಮ್ಮದು ಪರಿಹಾರ ನಮ್ಮದು

ಶ್ರೀ ಸಾಯಿಬಾಬ ಉಪಾಸಕರು
ದಕ್ಷಿಣ ಭಾರತದಾದ್ಯಂತ ಜನಮನ್ನಣೆ ಪಡೆದಿರುವ ವಂಶಪಾರಂಪರಿಕ
ವಶೀಕರಣ ಮಾಂತ್ರಿಕರು
ಶ್ರೀಯುತ ಪರಶುರಾಮ್ ಗುರೂಜಿ
ಸ್ತ್ರೀ ಪುರುಷ ವಶೀಕರಣ, ಸತಿಪತಿ ಕಲಹ, ಡೈವೋರ್ಸ್ ಪ್ರಾಬ್ಲಮ್, ಸಾಲಬಾಧೆ, ಪ್ರೇಮವಿಚಾರ, ಸಂತಾನಫಲ, ವ್ಯಾಪಾರಾಭಿವೃದ್ಧಿ, ಜಮೀನು ವಿಚಾರ, ಕೋರ್ಟ್‌ಕೇಸ್, ಮಾಟಮಂತ್ರ, ಪ್ರೇತಬಾಧೆ ಇನ್ನಿತರ ನಿಮ್ಮ ಸಮಸ್ಯೆ ಏನೇ ಇರಲಿ ಎಷ್ಟೇ ಕಠಿಣವಾಗಿರಲಿ
ಕೇರಳ ಮತ್ತು ಕೊಳ್ಳೇಗಾಲದ 16ನೇ ಶತಮಾನದ ಪ್ರಾಚೀನ ತಾಳೆಗ್ರಂಥದ ರಹಸ್ಯವಾದ ಮಹಾರುದ್ರಶೂಲ ಪ್ರಣವಶಕ್ತಿಯಿಂದ
ಕೇವಲ 5 ದಿನದಲ್ಲಿ 100% ಪರಿಹಾರ ಶತಸಿದ್ಧ
ನೀವು ಎಷ್ಟೋ ದೈವ, ದೇವಸ್ಥಾನ ಮತ್ತು ಜ್ಯೋತಿಷ್ಯರಲ್ಲಿ ಕೇಳಿ ಪರಿಹಾರ ಸಿಗದೆ ನೊಂದಿದ್ದರೆ ಶೀಘ್ರ ಪರಿಹಾರಕ್ಕಾಗಿ ಇವರನ್ನೊಮ್ಮೆ ಭೇಟಿಮಾಡಿ.
ಇಲ್ಲಿ ಹೇಳುವ ವಿಷಯವನ್ನು ಗುಪ್ತವಾಗಿಡಲಾಗುವುದು ಹಾಗೂ ಗುರೂಜಿಯವರಲ್ಲಿ ನಿಸ್ಸಂಕೋಚದಿಂದ ಮಾತನಾಡಲು ಕರೆಮಾಡಿ:
9620444460
ಖಾಯಂ ಮನೆ ವಿಳಾಸ:
ಶ್ರೀಬಾಲಾಜಿ ಜ್ಯೋತಿಷ್ಯಂ
ಬನಶಂಕರಿ ದೇವಸ್ಥಾನದ ಹತ್ತಿರ, ಮುಖ್ಯಬಸ್‌ನಿಲ್ದಾಣದ ಪಕ್ಕದಲ್ಲಿ, ಬನಶಂಕರಿ ಬೆಂಗಳೂರು.
ವಿಶೇಷ ಸೂಚನೆ: ಈ ಪೇಪರ್ ಕಟ್ಟಿಂಗ್ ತಂದವರಿಗೆ ಮುಜರಾಯಿ ಇಲಾಖೆ ಮತ್ತು ಧಾರ್ಮಿಕ ದತ್ತಿ ಇಲಾಖೆ ಹಾಗೂ ಮಾಡಾಯಿಕಾವ್ ಭಗವತಿ ದೇವಸ್ಥಾನಂ (ತಳಿಪರಂ) ಕೇರಳ ವತಿಯಿಂದ ಉಚಿತ ಸೇವೆಗಳು ಮತ್ತು ಪರಿಹಾರಗಳು ಲಭ್ಯವಿದೆ.